ಸಾಕ್ಷಿಯನ್ನು ದಿಃ 05-11-2018 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ  ಶ್ರೀ ವಾಯ್ ಆರ್ ಜಿ ವಕೀಲರಿಂದಃ

ಜವಾಹರ ಇವರು 2014 ರಲ್ಲಿ ವಿಲ್‌ನ್ನು ಬರೆದುಕೊಟ್ಟಿದ್ದಾರೆ ಆದರೆ ಯಾವ ತಾರೀಖಿನಂದು ಬರೆದುಕೊಟ್ಟರು ಎಂದು ನನಗೆ ಗೊತ್ತಿಲ್ಲ. ಜವಾಹರ ಇವರು ದಿನಾಂಕಃ 08-08-2017 ರಂದು ತೀರಿಕೊಂಡಿದ್ದಾರೆ. ದಿಃ 18-09-2014 ರಂದು ಜವಾಹರ ಇವರು ನೋಂದಾಯಿತ ವಿಲ್ ಬರೆದುಕೊಟ್ಟಿದ್ದಾರೆ. ದಿಃ 08-09-2017 ರಂದು ನಾನು ಒಂದು ಅರ್ಜಿಯನ್ನು ಜವಾಹರ ಮರಣ ಶಾಸನ ಬರೆದುಕೊಟ್ಟಿದ್ದಾರೆ ಎಂದು ಅರ್ಜಿ ಹಾಕಿದ್ದೇನೆ ಎಂದರೆ ನನಗೆ ನೆನಪಿಲ್ಲ. ಜವಾಹರ ಇವರು ಮೃತ್ಯು ಪತ್ರ ಬರೆದುಕೊಟ್ಟ ನಂತರ ನಾನು ಸ್ವತಃ ಡಿಕ್ಲೇರೇಶನ್ ಅರ್ಜಿ ಮಾಡಿಲ್ಲ. ಜವಾಹರ ಇವರು ನನಗೆ ಅಧಿಕಾರ ಪತ್ರ ಬರೆದುಕೊಟ್ಟಿದ್ದಾರೆ ಎಂದು ಅರ್ಜಿ ಹಾಕಿದ್ದೇನೆ ಎಂದರೆ ಸರಿ ಜವಾಹರ ಇವರ ಸತ್ತ ನಂತರ ಅವರು ಬರೆದುಕೊಟ್ಟಂತಹ ಜಿ ಪಿ ಎ ಗೆ ಮಹತ್ವ ಇಲ್ಲ ಎಂದರೆ ಸರಿ ಅಲ್ಲ. ಅವರ ಸಾವಿನ ನಂತರ ಅವರ ಮೃತ್ಯು ಪತ್ರನು ಮುಗಿದು ಹೋಗುತ್ತದೆ ಎಂದರೆ ಸರಿ ಅಲ್ಲ. ಜವಾಹರ ಇವರು ಸತ್ತ ನಂತರ ನಾನು ಮೃತ್ಯು ಪತ್ರವನ್ನು ಹುಟ್ಟಿಸಿಕೊಂಡಿದ್ದೇನೆ ಎಂದರೆ ಸರಿ ಅಲ್ಲ. ಪ್ರತಿವಾದಿ 1 ರಿಂದ 5 ಇವರು ಪ್ರತಿವಾದಿ 6 ಇವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆದ್ದರಿಂದ ಈ ದಾವೆಯಲ್ಲಿ ನನಗೆ ಸಾಕ್ಷಿ ಹೇಳಲು ಅಧಿಕಾರ ಇಲ್ಲ ಎಂದರೆ ಸರಿ ಅಲ್ಲ. ಜವಾಹರ ಇವರು ಸತ್ತ ನಂತರ ದಾವಾ ಮುಂದುವರೆಸಲು ಅಧಿಕಾರ ಇದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ. ಈ ಕೇಸಿನಲ್ಲಿ ನಾನು ಮುಂದುವರೆಯಲು ಯಾವುದೆ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿ ಅಲ್ಲ. ವಿಲ್‌ನ್ನು ನಾನು ದಿಃ 18-9-2014 ರಂದು ಹುಟ್ಟಿಸಿಕೊಂಡಿದ್ದೇನೆ ಎಂದರೆ ಸರಿ ಅಲ್ಲ. ಹೆಬ್ಬಟ್ಟಿನ ಗುರುತನ್ನು ಗುರುತಿಸಿ ಯಾರು ಸಹಿ ಮಾಡಿಲ್ಲ ಎಂದರೆ ಸರಿ. ವಿಲ್ ನಲ್ಲಿ ಇರುವಂತಹ ಹೆಬ್ಬಟ್ಟಿನ ಗುರುತು ಜವಾಹರ ಇವರ ಹೆಬ್ಬಟ್ಟಿನ ಗುರುತು ಅಲ್ಲ ಎಂದರೆ ಸರಿ ಅಲ್ಲ. ನಾನು ಬೇರೆಯವರನ್ನ ನಿಲ್ಲಿಸಿ ಮೃತ್ಯು ಪತ್ರ ತಯಾರು ಮಾಡಿಕೊಂಡಿದ್ದೇನೆ ಎಂದರೆ ಸರಿ ಅಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಹಿಃ 05-11-2018

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ.